ದುರುಪಯೋಗ ಪಡಿಸಿಕೊಳ್ಳುವ ಕಾರಣಕ್ಕಾಗಿ ಸಾರ್ವಜನಿಕ ಕಾಲುದಾರಿಗೆ ಬೇಲಿ ಹಾಕುವ ಮೂಲಕ ಖಾಸಗಿ ಉದ್ಯಾನವನವನ್ನು ಸೃಷ್ಟಿಸಲು ಆಯೋಗವು ಅನುಮತಿ ನೀಡಲಿಲ್ಲ. ತೋಟಗಾರಿಕಾ ಇಲಾಖೆಯು ಬೇಲಿಗೆ ಬದಲಾಗಿ ಉತ್ತಮ ಪೊದೆ ಗಿಡ ಬೆಳೆಸಿ ತಡೆಯನ್ನು ನಿರ್ಮಿಸಬಹುದಾಗಿದ್ದು ಇದರಿಂದ ಅಲ್ಲಿ ದೂರಸಂಪರ್ಕ ಇಲಾಖೆಯ ನೌಕರರಿಗೆ ಆ ಪ್ರದೇಶವು ಪರಭಾರೆಗೊಳಿಸುವ ಉದ್ದೇಶವಿರುವುದಿಲ್ಲ ಎಂಬುದಾಗಿ ಶಿಫಾರಸು ಮಾಡಿದೆ.

ಈ ವರದಿ ಸಲ್ಲಿಸಿರುವ ಅವಧಿಯಲ್ಲಿ ಆಯೋಗವು ಈಮುಂದಿನನಿರ್ದಿಷ್ಟಯೋಜನೆಗಳನ್ನು ವಿವರವಾಗಿ ಪರಿಶೀಲಿಸಿದೆ ಮತ್ತು ಬೆಂಗಳೂರು ಮಹಾನಗರ ಪಾಲಿಕೆಗೆ ಮಾರ್ಗದರ್ಶನಗಳು, ಸಲಹೆ ಮತ್ತು ವಿನ್ಯಾಸದಲ್ಲಿ ಮಾರ್ಪಾಡುಗಳನ್ನು ನೀಡಿದೆ.

ಬೆಂಗಳೂರು ನಗರದಲ್ಲಿ ಎರಡು ತಿಂಗಳಿಗೊಮ್ಮೆ ವಿದ್ಯುತ್ ಬಿಲ್ಲು ನೀಡುವ ಪದ್ಧತಿಯನ್ನು ರದ್ದುಗೊಳುಸುವ ಬಗ್ಗೆ

305 (251) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎರಡು ತಿಂಗಳಿಗೊಮ್ಮೆ ವಿದ್ಯುತ್ ಬಿಲ್ಲು ನೀಡುವ ಪದ್ಧತಿಯನ್ನು ಜಾರಿಗೆ ತರಲಾದ ಭಾಗಗಳು ಯಾವುವು?

ಆ) ಇದರಿಂದ ಬಳಕೆದಾರರು ಒಂದು ತಿಂಗಳಲ್ಲಿಎರಡು ತಿಂಗಳಿನ ಮೊತ್ತ ಹಾಗೂ ಮತ್ತೊಂದು ತಿಂಗಳಲ್ಲಿ ಮುಂಗಡ ಹಣ ಪಾವತಿ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದರಿಂದ ಸಾರ್ವಜನಿಕರಿಗೆ ತೊಂದರೆಗಳಾಗುತ್ತಿರುವುದರಿಂದ ಕೂಡಲೇ ಎರಡು ತಿಂಗಳಿಗೊಮ್ಮೆ ವಿದ್ಯುತ್ ಬಿಲ್ಲು ನೀಡುವ ಪದ್ದತಿಯನ್ನು ಸರ್ಕಾರ ರದ್ದುಗೊಳಿಸಿ ಮೊದಲಿನಂತೆ ಪ್ರತಿತಿಂಗಳು ಬಿಲ್ಲನ್ನು ನೀಡುವ ಪದ್ದತಿಯನ್ನು ಪುನಃ ಆರಂಭಿಸಲಾಗುವುದೆ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಎರಡು ತಿಂಗಳಿಗೊಮ್ಮೆವಿದ್ಯುತ್ ಬಿಲ್ಲು ನೀಡುವ ವ್ಯವಸ್ಥೆಗೆ ಆಯ್ಕೆ ಮಾಡಲಾದ ಪ್ರದೇಶಗಳ ವಿವರಗಳು ಕೆಳಕಂಡಂತಿದೆ.

1) ಸಿ-3 ಉಪ ವಿಭಾಗ	-	ಮತ್ತಿಕೆರೆ
2) ಸಿ-4 ಉಪ ವಿಭಾಗ	-	ಹೆಬ್ಬಾಳ್
3) ಸಿ-2 ಉಪ ವಿಭಾಗ	-	ಮಲ್ಲೇಶ್ವರಂ
4) ಡಬ್ಲ್ಯೂ-2 ಉಪವಿಭಾಗ	-	ಚಾಮರಾಜ ಪೇಟೆ
5) ಡಬ್ಲ್ಯೂ-1ಉಪವಿಭಾಗ	-	ಎನ್.ಆರ್.ಕಾಲೋನಿ
6) ಎನ್-2 ಉಪವಿಭಾಗ	-	ವಿಜಯನಗರ
7) ಎನ್-3 ಉಪ ವಿಭಾಗ	-	ಬಸವೇಶ್ವರನಗರ
8) ಎನ್-1 ಉಪ ವಿಭಾಗ	-	ರಾಜಾಜಿನಗರ

9) ಇ-6 ಉಪ ವಿಭಾಗ - ಇಂದಿರಾನಗರ
10) ಇ-5 ಉಪ ವಿಭಾಗ - ಕಾಕ್ಸ್ ಟೌನ್
11) ಇ-4 ಉಪ ವಿಭಾಗ - ದೂರವಾಣಿನಗರ
12) ಎಸ್-4 ಉಪ ವಿಭಾಗ - ಕೋರಮಂಗಲ
13) ಎಸ್-5 ಉಪ ವಿಭಾಗ - ಬನಶಂಕರಿ 2ನೇ ಹಂತ
14) ಎಸ್-6 ಉಪ ವಿಭಾಗ - ಜೆ.ಪಿ.ನಗರ
15) ಎಸ್-1 ಉಪ ವಿಭಾಗ - ಜಯನಗರ

ಅ) ಎರಡು ತಿಂಗಳಿಗೊಮ್ಮೆ ಮೀಟರ್ ರೀಡಿಂಗ್ ತೆಗೆದುಕೊಂಡು ಬಿಲ್ಲು ನೀಡುವಾಗ ಮುಂಗಡ ಹಣ ಪಾವತಿಸಿದ ಹಣವನ್ನು ಈ ಎರಡು ತಿಂಗಳ ಬಿಲ್ಲು ಮೊತ್ತದಲ್ಲಿ ಕಳೆದು ಉಳಿಕೆ ಮೊತ್ತಕ್ಕೆ ಮಾತ್ರ ಬಿಲ್ಲು ನೀಡಲಾಗುತ್ತಿದೆ.

ಇ) ಈಗ ಇರುವುದು ದ್ವೈಮಾಸಿಕ ಮಾಪನದ ಮಾಸಿಕ ಬಿಲ್ಲಿಂಗ್ ಪದ್ಧತಿ. ಈ ಪದ್ಧತಿಯಲ್ಲಿ ಎರಡು ತಿಂಗಳಿಗೊಮ್ಮೆ ಮಾಪಕದ ಮಾಪನ ತೆಗೆದುಕೊಳ್ಳಲಾಗುವುದಾದರೂ, ಗ್ರಾಹಕರು ಪ್ರತಿ ತಿಂಗಳೂ ಬಿಲ್ಲನ್ನು ಪಾವತಿಮಾಡ ಬೇಕಾಗುತ್ತದೆ. ಬಳಕೆದಾರರಿಗೆ ಹೊರೆಯನ್ನುಕಡಿಮೆ ಮಾಡುವ ಸಲುವಾಗಿ, ಮಾಪನ ತೆಗೆದುಕೊಳ್ಳುವ ತಿಂಗಳನ ಬಿಲ್ಲಿನಲ್ಲಿ ಆ ತಿಂಗಳಿನಲ್ಲಿ ಪಾವತಿ ಮಾಡಬೇಕಾದ ಮೊಬಲಗು ಮತ್ತು ಮುಂದಿನ ತಿಂಗಳು ಪಾವತಿಮಾಡಬೇಕಾದ ಮೊಬಲಗಿನ ಸೂಚನೆನೀಡಲಾಗಿರುತ್ತದೆ. ನಂತರದ ಮಾಪನದ ತಿಂಗಳ ಬಿಲ್ಲು ಮೊತ್ತದಲ್ಲಿ ಕಳೆದು ಉಳಿಕೆ ಮೊತ್ತಕ್ಕೆ ಮಾತ್ರ ಬಿಲ್ಲು ನೀಡಲಾಗುತ್ತಿದೆ. ಮಾಸಿಕ ಮತ್ತು ದ್ವೈಮಾಸಿಕ ಬಿಲ್ಲುವ್ಯವಸ್ಥೆಯಲ್ಲಿವಿದ್ಯುತ್ ದರದ ಹಂತ ಅಥವಾ ಒಟ್ಟುಮೊಬಲಗಿನಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.

ಮೀಟರ್ ರೀಡರ್‌ಗಳ ಮತ್ತು ಲೆಡ್ಜರ್ ಕ್ಲಾರ್ಕ್‌ಗಳ ತೀವ್ರ ಕೊರತೆಯಿಂದಾಗಿ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಬಳಕೆದಾರರ ಸಂಖ್ಯೆಯು ಬಹುಗುಣವಾಗಿಹೆಚ್ಚುತ್ತಿದೆ. ಮತ್ತು ಸಿಬ್ಬಂದಿಯ ಸಂಖ್ಯೆಯು ಕಡಿಮೆಆಗುತ್ತಿದೆ. ಸಕಾಲಕ್ಕೆ ವಿದ್ಯುತ್ ಬಿಲ್ಲುಗಳು ಬಾರದಿರುವ ಬಗೆಗೆ ಬಳಕೆದಾರರಿಂದ ಅನೇಕ ದೂರುಗಳು ಬಂದಿದೆ. ಶೇಕಡಾ 100ರಷ್ಟು ಮಾಪಕಗಳ ಒದುವಿಕೆ ಮತ್ತು ಎಲ್ಲಾ ಸ್ಥಾವರಗಳಿಗೆ ಬಿಲ್ಲು ನೀಡುವ ಸಲುವಾಗಿ, ಈಗ ಇರುವ ಸಿಬ್ಬಂದಿ ಬಲವನ್ನೇ ಬಳಸಿಕೊಂಡು ಕಾರ್ಯನಿರ್ವಹಿಸಲು ಈ ದ್ವೈಮಾಸಿಕ ಬಿಲ್ಲು ಮಾಡುವ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯಿಂದ ಬಳಕೆದಾರರಿಗೆ ಯಾವುದೇ ತೊಂದರೆಯಾಗದಂತೆ ಜಾಗ್ರತೆ ವಹಿಸಲಾಗಿದೆ. ಆದಾಗ್ಯೂ ಸಿಬ್ಬಂದಿಯ ಕೊರತೆಯುನಿವಾರಣೆಯಾದಲ್ಲಿ ಈ ವಿಚಾರವನ್ನು ಪುನರ್ ಪರಿಶೀಲಿಸಬಹುದಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ವಿವೇಚನಾ ಜೋಟಾದಿಂದ ಹಂಚಿಕೆ ಮಾಡಿರುವ ನಿವೇಶನಗಳು

306(278) ಶ್ರೀ ರಾಮ ಲಿಂಗರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998ನೇ ಜನವರಿಯಿಂದ 1999ನೇಜನವರಿ ವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಾರ್ವಜನಿಕರಿಗೆ ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು ?